**ಸಿ.ಸಿ.ನಂ.: 3/2024**

ಪಿ.ಡಬ್ಲ್ಯೂ: 3

(ಇಂದು ದಿನಾಂಕಃ **26-09-2025** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಪಾಟೀ ಸವಾಲು –ಆರೋಪಿ ಪರ ಶ್ರೀ. P.S.N. ವಕೀಲರಿಂದ**

**1.** ಈ ಪ್ರಕರಣದ ಸಾಲದ ಅರ್ಜಿಯು ಸಾಲದ ನವೀಕರಕ್ಕಾಗಿ ಸಲ್ಲಿಸಿದ ಅರ್ಜಿಯಾಗಿರುತ್ತದೆ. ಈ ಹಿಂದೆ ಆರೋಪಿತರು ಪಡೆದಿದ್ದಾನೆ ಎನ್ನಲಾದ ಸಾಲವು ಎಷ್ಟು ಮೊತ್ತದ ಸಾಲ ಎಂದು ನನಗೆ ಈಗ ನೆನಪಿಗೆ ಬರುತ್ತಿಲ್ಲ. ಮೊದಲು ಮಾಡಿದ್ದಾರೆ ಎನ್ನಲಾದ ಸಾಲಕ್ಕೆ ಯಾರು ಜಾಮೀನುದಾರರು ಇದ್ದಾರೆ ಎಂದು ದಾಖಲಾತಿಯನ್ನು ನೋಡಿ ಹೇಳಬೇಕಾಗುತ್ತದೆ.

**2.** ಈ ಪ್ರಕರಣದ ಸಾಲಕ್ಕಾಗಿ ದಿಃ 15/09/2021 ರಂದು ಸಾಲದ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸಾಲದ ಅರ್ಜಿಗೆ ಸಂಬಂಧಿಸಿದಂತೆ ಸದ್ರಿ ಸಾಲದ ಅರ್ಜಿಯ ಹಿಂದೆ Office Remark ಎಂದು ಇರುವ ಜಾಗದಲ್ಲಿ ಶಾಖಾ ವ್ಯವಸ್ಥಾಪಕರು Remarks ಗಳನ್ನು ನಮೂದು ಮಾಡಬೇಕಾಗುತ್ತದೆ. ಈ ಪ್ರಕರಣದ ಸಾಲಗಾರನ ಈ ಹಿಂದಿನ ಸಾಲವು ಕಟ್‌ಬಾಕಿಯಾಗಿತ್ತೋ ಇಲ್ಲವೋ ಎಂಬುವುದನ್ನು ದಾಖಲಾತಿಯನ್ನು ನೋಡಿ ಹೇಳಬೇಕಾಗುತ್ತದೆ.

**3.** ಸಾಲದ ನವೀಕರಣ ಎಂದರೆ ಸಾಲಗಾರರು ಈ ಹಿಂದೆ ಪಡೆದಂತಹ ಸಾಲದ ಅವಧಿ 1 ವರ್ಷ ಇದ್ದಂತಹ ಸಂದರ್ಭದಲ್ಲಿ ಸದ್ರಿ ಸಾಲವನ್ನು ನವೀಕರಣ ಮಾಡಿ ಕೊಡಬೇಕಾಗುತ್ತದೆ. ಈ ಹಿಂದಿನ ಸಾಲವನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದರೆ ಅದು ನವೀಕರಣ ಆಗುವುದಿಲ್ಲ

ಎಂದರೆ ಸಾಕ್ಷಿಯು ಒಂದು ವರ್ಷಕ್ಕೆ ಒಂದು ಬಾರಿ ನವೀಕರಣ ಮಾಡಲೇಬೇಕಾಗುತ್ತದೆ ಎಂದು ನುಡಿಯುತ್ತಾರೆ.

**4.** ಈ ಪ್ರಕರಣದ ಸಾಲವನ್ನು ದಿಃ 30-09-2021 ರಂದು ಪಡೆದುಕೊಂಡಿರುತ್ತಾರೆ. ಈ ಪ್ರಕರಣದ ಸಾಲವು ದಿಃ 30-09-2021 ರ ನಂತರದಲ್ಲಿ ನವೀಕರಣಗೊಂಡಿರುವುದಿಲ್ಲ. ದಿಃ 30/09/2021 ರಂದು ಸಾಲದ ಹಣವನ್ನು ಖಾತೆಗೆ ಜಮಾ ಮಾಡಿರುತ್ತೇವೆ. ಈ ಪ್ರಕರಣದ ಸಾಲದ ಹಣವನ್ನು ಖಾತೆಗೆ ದಿಃ 30/09/2021 ರಂದು ಜಮಾ ಮಾಡಿರುತ್ತೇವೆ.

**5.** **ನಿ.ಪಿ.12** ನ್ನು ತಯಾರಿಸಲು ನಮ್ಮ ಫಿರ್ಯಾದಿ ಸಂಸ್ಥೆಯ ಸಾಫ್ಟವೇರನ್ನು ಬಳಸಿ ತಯಾರಿಸಿರುತ್ತೇವೆ. ಒಂದು ಸಾಫ್ಟವೇರನ್ನು ಬಳಸಿ ಖಾತೆಯ ವಿವರಗಳ್ನು ತೆಗೆದಂತಹ ಸಂದರ್ಭಗಳಲ್ಲಿ ಅವುಗಳೆಲ್ಲವು ಒಂದೇ ತೇರವಾಗಿ ಇರುತ್ತದೆ ಎಂದರೆ ಸರಿ. ಸಾಲದ ಖಾತೆಯಲ್ಲಿ ಸಾಲ ಮಂಜೂರಾದ ದಿನಾಂಕ ಹಾಗೂ ಸಾಲ ಮಂಜೂರಾದ ಮೊತ್ತ ನಮೂದಾಗಿರುತ್ತದೆ ಎಂದರೆ ಸರಿ. ನಮ್ಮ ಫಿರ್ಯಾದಿ ಸಂಸ್ಥೆಯಲ್ಲಿ Smart Bank ಎಂಬ Software ನ್ನು ಬಳಸುತ್ತೇವೆ. ನಮಗೆ ಸಾಲದ ಖಾತೆಯು ಸದ್ರಿ Software ನ್ನು ಹೊರತುಪಡಿಸಿ ಬೇರೆ ತೇರನಾಗಿ ಬೇಕಾದಂತಹ ಸಂದರ್ಭದಲ್ಲಿ ನಾವು ಬೇರೆ ಕಂಪ್ಯೂಟರನ್ನು ಬಳಸಿ ತೆಗೆಯಬೇಕು.

**6.** ನಿ.ಪಿ.12 ಈ ಪ್ರಕರಣಕ್ಕೆ ಸಂಬಂಧಿಸಿದ ಸಾಲದ ಖಾತೆ ಆಗಿರುತ್ತದೆ. ನಿ.ಪಿ.12 ರ ಪ್ರಕಾರ ಸದ್ರಿ ಖಾತೆಗೆ ಮೊದಲ ಹಣ ದಿಃ 31/12/2021 ರಂದು ರೂ.**3,55,000-00** ಜಮಾ ಆಗಿರುವ ಕುರಿತಾಗಿ ನಮೂದಾಗಿರುತ್ತದೆ ಎಂದರೆ ಸರಿ.

**7.** ಈ ಪ್ರಕರಣದಲ್ಲಿ ಹಾಜರುಪಡಿಸಿದ Contra Receipt ಗಳು ಯಾವ ದಿನಾಂಕದಂದು ಖಾತೆಗೆ ಜಮಾ ಆಗಿರುತ್ತದೆಯೋ ಅದೇ ದಿನಾಂಕದಂದು ಇರುತ್ತದೆ ಎಂದರೆ ಸರಿ. ಪ್ರಕರಣ ದಾಖಲಿಸುವ ಸಂದರ್ಭದಲ್ಲಿ ನಿ.ಪಿ.12 ರಿಂದ 20 ರ ದಾಖಲಾತಿಗಳು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಿಪಿ 12 ರಿಂದ 20 ರ ದಾಖಲಾತಿಗಳು ನಾನು ಈ ಪ್ರಕರಣದಲ್ಲಿ ಸಾಕ್ಷಿ ನುಡಿಯುವ ಸಂದರ್ಭದಲ್ಲಿ ನಿಶಾನೀಕರಿಸಿಕೊಂಡಿರುತ್ತೇನೆ. ಈ ಪ್ರಕರಣದಲ್ಲಿ ಪ್ರಾಸಾ 2 ರವರಿಗೆ ಸಾಕ್ಷಿ ವಿಚಾರಣೆಯನ್ನು ಮಾಡಿದ ನಂತರದಲ್ಲಿ ಈ ಪ್ರಕರಣ ಸುಳ್ಳು ಎಂದು ತಿಳಿಯುತ್ತದೆ ಎಂದು ನಾನು ಹಾಗೂ ಫಿರ್ಯಾದಿ ಸಂಸ್ಥೆಯವರು ನಿ.ಪಿ.12 ರಿಂದ 20 ರ ದಾಖಲಾತಿಗಳು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**8.** ಯಾವುದೇ ರಶೀದಿಗಳಿಗೆ ಸೀರಿಯಲ್ ನಂಬರಗಳು ಇರುತ್ತವೆ ಎಂದರೆ ಸರಿ. ಸದ್ರಿ ಸೀರಿಯಲ್ ನಂಬರಗಳು ಮುದ್ರಣವಾಗಿ ಬರುತ್ತದೆ ಎಂದರೆ ಸರಿ. ಸದ್ರಿ ರಶೀದಿಗಳ ಮೂಲ ಪ್ರತಿಯನ್ನು ತೆಗೆದಂತಹ ಸಂದರ್ಭದಲ್ಲಿ ಅವುಗಳ ಕಾರ್ಬನ ಪ್ರತಿಗಳು ಹಾಗೆಯೇ ಇರುತ್ತದೆ ಎಂದರೆ ಸರಿಯಲ್ಲ. ನಾವು ಹಾಜರುಪಡಿಸಿದ ಕಾಂಟ್ರಾ ರಶೀದಿಗಳು ಮೂಲ ರಶೀದಿಗಳು ಆಗಿರುತ್ತವೆ. ಸದ್ರಿ ದಾಖಲಾತಿಯನ್ನು ನಾವು ಇತ್ತೀಚೆಗೆ ಸೃಷ್ಟಿಸಿ ಹಾಜರುಪಡಿಸಿರುವುದರಿಂದ ಸದ್ರಿ ದಾಖಲಾತಿಯ ಸೀರಿಯಲ್ ನಂಬರಗಳು ಇರುವುದಿಲ್ಲ ಎಂದರೆ ಸರಿಯಲ್ಲ.

**ಸಿ.ಸಿ.ನಂ.: 3/2024**

ಪಿ.ಡಬ್ಲ್ಯೂ: 3

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

**ಸಹಿ ಇದೆ.**

ಹೆ.ಪ್ರ.ದ.ನ್ಯಾ.ದಂ. ಕುಮಟಾ